**ಇಂದು ದಿನಾಂಕಃ 16-09-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ JPA ವಕೀಲರಿಂದಃ-**

ಈ ದಾವೆಯನ್ನು ನನ್ನ ಹಂಡತಿ ಹೊಲ ಮನೆ ಬೇಕು ಎಂದು ನರಸಪ್ಪ ಹಾಗೂ ಅವರ ಸಹೋದರರ ವಿರುದ್ದ ಸಲ್ಲಿಸಿರುತ್ತಾರೆ. ಮದುವೆಯಾದಾಗಿನಿಂದ ನನ್ನ ಹೆಂಡತಿಯಾದ 1ನೇ ವಾದಿ ನನ್ನ ಜೊತೆ ವಾಸವಿದ್ದಾರೆ ಎಂದರೆ ಸರಿ. ಈ ದಾವೆಯನ್ನು ನನ್ನ ಹೆಂಡತಿಯ ತಾಯಿಯಾದ ಸಾಬವ್ವರವರು ಸಹ ಸಲ್ಲಿಸಿದ್ದಾರೆ ಎಂದರೆ ಸರಿ. ನಾನು 5ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

ಯಂಕಪ್ಪರವರ ತಂದೆ ಹೆಸರು ನನಗೆ ಗೊತ್ತಿಲ್ಲ. ಯಂಕಪ್ಪರವರು ಒಟ್ಟು 3 ಜನ ಸಹೋದರರು ಇರುತ್ತಾರೆ. ಅವರ ಹೆಸರು ಕೇಳಿದಾಗ ಸಾಕ್ಷಿ ಯಂಕಪ್ಪ ಮತ್ತು ದೇವಪ್ಪ ಎಂದು ನುಡಿಯುತ್ತಾರೆ. ಯಂಕಪ್ಪ ಮತ್ತು ದೇವಪ್ಪರವರು ಒಂದೇ ಕಡೆಗೆ ವಾಸವಿದ್ದರು. ದಾವಾ ಜಮೀನುಗಳನ್ನು ನಾನು ನೋಡಿದ್ದೇನೆ. ಸಾಕ್ಷಿ

ಮುಂದುವರೆದು ಸದರಿ ಜಮೀನುಗಳು ಭೋಗಲಿಂಗದಳ್ಳಿ ತಾಂಡಾದ ಹತ್ತಿರ ಇವೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಎರಡು ಜಮೀನುಗಳಿಗಾಗಿ ಸಲ್ಲಿಸಲಾಗಿದೆ. ಸದರಿ ಎರಡು ಜಮೀನುಗಳಲ್ಲಿ ಒಂದು ಜಮೀನು ಚಿಂಚೋಳಿಯ ಬೀದರ ರಸ್ತೆ ಹತ್ತಿರ ಇದೆ ಎಂದರೆ ಸರಿ. ಸದರಿ ಜಮೀನಿಂದ ಭೋಗಲಿಂಗದಳ್ಳಿ ಗ್ರಾಮದ 4 ರಿಂದ 5 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ದಾವಾ ಜಮೀನುಗಳು ಯಂಕಪ್ಪರವರ ಹೆಸರಿನಲ್ಲಿ ಇವೆ. ಚಿಂಚೋಳಿಯಲ್ಲಿರುವ ಸ.ನಂ. 7 ರ ಜಮೀನು 2ನೇ ಪ್ರತಿವಾದಿಯ ಕಬ್ಜಯಲ್ಲದೆ. ಇನ್ನೊಂದು ಜಮೀನು ಎಲ್ಲರೂ ಸೇರಿ ಕಡತಿಗಾಗಿ ನೀಡಿರುತ್ತಾರೆ. ಯಾರಿಗೆ ಕಡತಿಯಾಗಿ ನೀಡಿರುತ್ತಾರೆ ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವನ ಜೀವಿತ ಕಾಲದಿಂದ ಸದರಿ ಜಮೀನು ಕಡತಿಗಾಗಿ ನೀಡಿರುತ್ತಾರೆ. ಸದರಿ ಜಮೀನುಗಳಿಂದ ನನ್ನ ಅತ್ತೆಯಾದ 2ನೇ ವಾದಿಯಾಗಲಿ ಅಥವಾ ನನ್ನ ಹೆಂಡತಿಯಾದ 1ನೇ ವಾದಿಯಾಗಲಿ ಯಾವುದೇ ಬೆಳೆಯನ್ನು ಪಡೆದಿಲ್ಲ ಎಂದರೆ ಸರಿ. ದಾವಾ ಸಿ ಜಮೀನು ನರಸಪ್ಪರವರ ಕಬ್ಜಯಲ್ಲಿದೆ ಎಂದರೆ ಸರಿ. ಈಗ 40-50 ವರ್ಷಗಳಿಂದ ಸದರಿ ದಾವಾ ಸಿ ಜಮೀನು ನರಸಪ್ಪರವರ ಕಬ್ಜಯಲ್ಲಿದೆ ಎಂದರೆ ಸರಿ. ಸದರಿ ಜಮೀನನ್ನು ಶಿವಪ್ಪರವರು ನರಸಪ್ಪರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ 20 ಗುಂಟೆ ಇದೆ ಎಂದು ನುಡಿಯುತ್ತಾರೆ. ಮಾರಾಟ ಮಾಡಿದರಿಂದ ಬಂದ ಹಣವನ್ನು ಶಿವಪ್ಪರವರು ಭೀಮಣ್ಣನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಭೀಮಣ್ಣರವರಿಗೆ ನೀಡಿದ ಕಾರಣ ಭೋಗಲಿಂಗದಳ್ಳಿಯಲ್ಲಿರುವ ಜಮೀನಿನಲ್ಲಿ ಶಿವಪ್ಪರವರು ಕಬ್ಜಯಲ್ಲಿದ್ದರು ಎಂದರೆ ಸಾಕ್ಷಿ ಅದು ಜಂಟಿಯಾಗಿದೆ ಎಂದು ನುಡಿಯುತ್ತಾರೆ.

ಭೋಗಲಿಂಗದಳ್ಳಿಯಲ್ಲಿರುವ ಜಮೀನಿನ ಉತ್ಪನ್ನಗಳನ್ನು ಶಿವಪ್ಪರವರು ಪಡೆಯುತ್ತಿದ್ದರು ಎಂದರೆ ಸಾಕ್ಷಿ ಭೀಮಣ್ಣ ಮತ್ತು ಶಿವಪ್ಪರವರು ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಮಾವ ಮೃತಪಟ್ಟಾಗಿನಿಂದ ಅದರ ಉತ್ಪನ್ನಗಳನ್ನು ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ಭೋಗಲಿಂಗದಳ್ಳಿಯಲ್ಲಿರುವ ಜಮೀನನ್ನು ಶಿವಪ್ಪ ಮತ್ತು ಭೀಮಣ್ಣರವರು ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವ ಮೃತಪಟ್ಟು 15 ವರ್ಷಗಳಾಗಿವೆ.

ಚಿಂಚೋಳಿಯಲ್ಲಿ ಯಂಕಪ್ಪನಿಗೆ ಸೇರಿದ 4 ಮನೆಗಳು ಇವೆ ಎಂದರೆ ಸರಿ. ಈ ದಾವೆಯಲ್ಲಿ ಒಂದು ಮನೆ ಮಾತ್ರ ಸೇರಿಸಲಾಗಿದೆ ಎಂದರೆ ಸಾಕ್ಷಿ 4 ಮನೆ ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮನೆಗಳ ಸಂಖ್ಯೆ 302 ಇದೆ. ಸಾಕ್ಷಿ ಮುಂದುವರೆದು ಉಳಿದ 3 ಮನೆಗಳ ಸಂಖ್ಯೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಉಳಿದ 3 ಮನೆಗಳನ್ನು ಈ ದಾವೆಯಲ್ಲಿ ಯಾವ ಕಾರಣಕ್ಕಾಗಿ ಸೇರಿಸಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ.

ದಾವಾ ಸಿ ಜಮೀನನ್ನು ನಾನು ನೋಡಿದ್ದೇನೆ. ಸ.ನಂ. 7ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸ.ನಂ. 7ರಲ್ಲಿರುವ 20 ಗುಂಟೆ ಜಮೀನಿಗಾಗಿ ಸಲ್ಲಿಸಿದ್ದೇನೆ. ಸದರಿ ಜಮೀನಿನ ಪೂರ್ವಕ್ಕೆ

ಅರಿಹಳ್ಳ ಇದೆ ಎಂದರೆ ಸರಿ. ದಾವಾ ಸಿ ಜಮೀನಿನ ಪಶ್ಚಿಮಕ್ಕೆ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಸಿ ಜಮೀನಿನ ದಕ್ಷಿಣಕ್ಕೆ ಭೀಮಸೇನ ಆಚಾರ್ಯರವರ ಜಮೀನು ಇಲ್ಲ ಎಂದರೆ ಸರಿ. ದಾವೆ ಸಲ್ಲಿಸುವ ಸಮಯಕ್ಕೆ ದಾವಾ ಸಿ ಜಮೀನು ಸೇರಿಸಿರಲಿಲ್ಲ, ಯಾವ ಕಾರಣಕ್ಕಾಗಿ ಸೇರಿಸಿರಲಿಲ್ಲ ಎಂದು ನನಗೆ ಗೊತ್ತಿಲ್ಲ. ದಾವಾ ಸಿ ಜಮೀನನ್ನು ಭೀಮಣ್ಣರವರು ಮಾರಾಟ ಮಾಡಿದ ಕಾರಣ ಸೇರಿಸಿರಲಿಲ್ಲ ಆದ್ದರಿಂದ ಸೇರಿಸಿರಲಿಲ್ಲ ಎಂದರೆ ಸಾಕ್ಷಿ ಮಾರಾಟ ಮಾಡಿದ್ದಾರೆ ಆದರೆ ಈಗ 20 ಗುಂಟೆ ಉಳಿದಿದೆ ಎಂದು ನುಡಿಯುತ್ತಾರೆ. ಸದರಿ 20 ಗುಂಟೆ ಸಹ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ.

ನನ್ನ ಮಾವನಾದ ಭೀಮಣ್ಣ ಮತ್ತು ಶಿವಪ್ಪರವರು ತಮ್ಮ ಆಸ್ತಿಗಳನ್ನು ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಬಿ ಮತ್ತು ಸಿ ಆಸ್ತಿಗಳು ಪಾಲುಗಾರಿಕೆಯಲ್ಲಿ ಶಿವಪ್ಪನ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಪಾಲು ಆದ ನಂತರ ಬೇರೆ ಯಾವುದೇ ದಿನ ಶಿವಪ್ಪ ಮತ್ತು ಭೀಮಣ್ಣ ಒಟ್ಟಿನಲ್ಲಿ ಇರಲಿಲ್ಲ. ದಾವಾ ಆಸ್ತಿಗಳು ಶಿವಪ್ಪನ ಪಾಲಿಗೆ ಹೋಗಿದ್ದರು ಸಹ ಅವುಗಳು ಹಿರಿಯರ ಹೆಸರಿನಲ್ಲಿರುವುದನ್ನು ದೂರುಪಯೋಗ ಪಡಿಸಿಕೊಂಡು ನನ್ನ ಹೆಂಡತಿಗೆ ಮುಂದು ಮಾಡಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಚಕ್ಕುಬಂದಿ ನನಗೆ ಗೊತ್ತಿಲ್ಲದೇ ಇದ್ದರು ಸಹ ಪ್ರತಿವಾದಿಯರ ಜಮೀನನ್ನು ಪಡೆಯಲು ಸುಳ್ಳು ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ದಾವಾ ಆಸ್ತಿಗಳ ಚಕ್ಕುಬಂದಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**